ವಿದೇಶಿ ವಿನಿಮಯ ಇಲಾಖೆ
ವಿದೇಶಿ ಬಂಡವಾಳ ಹೂಡಿಕೆ ವಿಭಾಗ

ಪದೇಪದೇ ಕೇಳುವ ಪ್ರಶ್ನೆಗಳು (ಎಫ್‌ಎ ಕ್ಯೂಗಳು)

ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ(ಗಳಿಕೆ) ಮತ್ತು ವರ್ಗಾವಣೆ

ಭಾರತದ ಹೊರಗಡೆ ವಾಸವಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಉಪಬಂಧಗಳ ಮೇರೆಗೆ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆಗೆ ಸಂಬಂಧಿಸಿದ ವಿವಿಧ ವಿವಾದಾಂಶಗಳನ್ನು ತಿಳಿಯಪಡಿಸುವ ಸಲುವಾಗಿ, ಸಂಬಂಧಪಟ್ಟವರೆಲ್ಲರ ಮಾಹಿತಿಗಾಗಿ, ಆಗಾಗ ಕೇಳುವ ಪ್ರಶ್ನೆ (ಎಫ್‌ಎಕ್ಯೂ)ಗಳ ಮಾಲಿಕೆಯನ್ನು ಸಿದ್ಧಪಡಿಸಲಾಗಿದೆ. ಅನಿವಾಸಿ ಭಾರತೀಯ (ಎನ್‌ಆರ್‌ಐ)ನಿಂದ ಅಥವಾ ಭಾರತೀಯ ಮೂಲದ ವಿದೇಶಿ ರಾಷ್ಟ್ರೀಯನು (ಪಿಐಒ) ಅಥವಾ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನಿಂದ ಹಾಗೆಯೇ ಭಾರತದ ನಾಗರಿಕನಾಗಿಲ್ಲದ, ಭಾರತದಲ್ಲಿ ವಾಸವಾಗಿರುವ, ವ್ಯಕ್ತಿಯಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆಗೆ ಮತ್ತು ವರ್ಗಾವಣೆಗೆ ಸಂಬಂಧಿಸಿದ ವಿವಾದಾಂಶಗಳ ವ್ಯಾಪಕ ಆಯಾಮಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಪರಿಹರಿಸಬೇಕಾದ ಇತರ ವಿವಾದಾಂಶಗಳಿದ್ದ ಪಕ್ಷದಲ್ಲಿ ಆ ವಿಷಯವನ್ನು ಮುಖ್ಯ ಪ್ರಧಾನ ವ್ಯವಸ್ಥಾಪಕರು, ಭಾರತೀಯ ರಿಸರ್ವ್ ಬ್ಯಾಂಕ್, ವಿದೇಶಿ ಬಂಡವಾಳ ಹೂಡಿಕೆ ವಿಭಾಗ, ಕೇಂದ್ರ ಕಚೇರಿ, ಮುಂಬೈ – 400001 ಇವರಿಗೆ ಒಪ್ಪಿಸಬಹುದು.

ಈ ಪ್ರಶ್ನೆಗಳಲ್ಲಿ ಈ ಮುಂದಿನ ವಿಷಯಗಳು ಒಳಗೊಂಡಿವೆ:

(i) ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ನಿಯಂತ್ರಣಗಳು / ನಿರ್ದೇಶನಗಳು

(ii) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಖರೀದಿಯ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ.

(iii) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ದಾನದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ.

(iv) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಪಿತ್ರಾರ್ಜಿತವಾಗಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ.

(v) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಮಾರಾಟದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ವರ್ಗಾವಣೆ.

(vi) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ದಾನದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ವರ್ಗಾವಣೆ.

(vii) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಅಡಮಾನದ ರೂಪದಲ್ಲಿ ಭಾರತದಲ್ಲಿ ನಿವಾಸದ / ವಾಣಿಜ್ಯ ಸ್ವತ್ತಿನ ವರ್ಗಾವಣೆ.

(viii) ಅನಿವಾಸಿ ಭಾರತೀಯನಿಂದ / ಭಾರತೀಯ ಮೂಲದ ವಿದೇಶಿ ರಾಷ್ಟ್ರೀಯನಿಂದ ನಿವಾಸ/ವಾಣಿಜ್ಯ ಸ್ವತ್ತಿನ ಖರೀದಿಗಾಗಿ ಹಣ ಸಂದಾಯದ ವಿಧಾನ.

(ix) ಅನಿವಾಸಿ ಭಾರತೀಯನು / ಭಾರತೀಯ ಮೂಲದ ವ್ಯಕ್ತಿಯು ಖರೀದಿಸಿದ ನಿವಾಸದ/ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣವನ್ನು ಕಳುಹಿಸುವುದು.

(x) ಅನಿವಾಸಿ ಭಾರತೀಯನು / ಭಾರತೀಯ ಮೂಲದ ವ್ಯಕ್ತಿಯು ದಾನದ ರೂಪದಲ್ಲಿ ಪಡೆದ ನಿವಾಸದ / ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣವನ್ನು ರವಾನಿಸುವುದು.

(xi) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತವಾಗಿ ಬಂದ ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ರವಾನಿಸುವುದು.

(xii) ಭಾರತದಲ್ಲಿ ಅನುಮತಿಸಲಾದ ಚಟುವಟಿಕೆಯನ್ನು ನಡೆಸುವುದಕ್ಕಾಗಿ ಸ್ಥಿರಾಸ್ತಿಯ ಆರ್ಜನೆ.

(xiii) ವಿದೇಶಿ ದೂತಾವಾಸಿಗಳಿಂದ / ರಾಜತಾಂತ್ರಿಕರಿಂದ / ಕನ್ಸೂಲೇಟ್ ಜನರಲ್‌ಗಳಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ವರ್ಗಾವಣೆ.

(xiv) ಇತರ ವಿಷಯಗಳು.

I. ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ನಿಯಂತ್ರಣಗಳು / ನಿರ್ದೇಶನಗಳು

1. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಹೊರಡಿಸಿದ ನಿಯಂತ್ರಣಗಳನ್ನು / ನಿರ್ದೇಶನಗಳನ್ನು ಅಗತ್ಯವಿರುವ ವ್ಯಕ್ತಿಯು ಎಲ್ಲಿ ಪಡೆಯಬಹುದು?

ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆಗೆ ಸಂಬಂಧಿಸಿದ ನಿಯಂತ್ರಣಗಳನ್ನು ಅಧಿಸೂಚನೆ ಸಂ. ಎಫ್‌ಇಎಂಎ 64/2002–ಆರ್‌ಬಿ ದಿನಾಂಕ ಜೂನ್ 29, 2002 ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 65/2002–ಆರ್‌ಬಿ ದಿನಾಂಕ ಜೂನ್ 29, 2002 ಮತ್ತು ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 93/2003–ಆರ್‌ಬಿ ದಿನಾಂಕ ಜೂನ್ 6, 2003 ಇವುಗಳ ಮೂಲಕ ತಿದ್ದುಪಡಿ ಮಾಡಲಾದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿಸೂಚನೆ ಸಂ.ಎಫ್‌ಇಎಂಎ 21/2000 ಆರ್ ಬಿ ದಿನಾಂಕ ಮೇ 3, 2002ರಲ್ಲಿ ಅಧಿಸೂಚಿಸಲಾಗಿದೆ ಹಾಗೂ ಸಂಬಂಧಪಟ್ಟ ನಿರ್ದೇಶನಗಳನ್ನು ಎ.ಪಿ (ಡಿಐಆರ್ ಶ್ರೇಣಿಗಳು) ಸುತ್ತೋಲೆಗಳ ರೂಪದಲ್ಲಿ ಹೊರಡಿಸಲಾಗಿದೆ. ಇವುಗಳು ಭಾರತೀಯ ರಿಸರ್ವ್ ಬ್ಯಾಂಕಿನ ವೆಬ್ ಸೈಟ್: www.Fema.rbi.org.in ನಲ್ಲಿ ದೊರೆಯುತ್ತವೆ.

II. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಖರೀದಿಯ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ.

2. ಚಾಲ್ತಿಯಲ್ಲಿರುವ ವಿದೇಶಿ ವಿನಿಮಯ ನಿಯಂತ್ರಣಗಳ ಮೇರೆಗೆ ಭಾರತದಲ್ಲಿ ಸ್ಥಿರಾಸ್ತಿಯ ಖರೀದಿಗಾಗಿ ಯಾರಿಗೆ ಸಾಮಾನ್ಯ ಅನುಮತಿ ದೊರೆಯುತ್ತದೆ?

ಭಾರತದ ಪೌರನಾಗಿರುವ (ಎನ್ ಆರ್ ಐ) ಅಥವಾ ಭಾರತೀಯ ಮೂಲದ ವ್ಯಕ್ತಿಯಾಗಿರುವ (ಪಿಓಐ) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿ ಮಾತ್ರ ಭಾರತದಲ್ಲಿ ನಿವಾಸದ / ವಾಣಿಜ್ಯದ ಸ್ವತ್ತನ್ನು ಖರೀದಿಸಲು ಸಾಮಾನ್ಯ ಅನುಮತಿಯು ಲಭ್ಯವಿದೆ.

3. ಭಾರತೀಯ ಮೂಲದ ವ್ಯಕ್ತಿ (ಪಿ ಐ ಒ) ಎಂದರೆ ಯಾರು?

ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆಯ ಉದ್ದೇಶಕ್ಕಾಗಿ , ಭಾರತೀಯ ಮೂಲದ ವ್ಯಕ್ತಿ ಎಂದರೆ (i) ಯಾವುದೇ ಸಮಯದಲ್ಲಿ ಭಾರತೀಯ ಪಾಸ್ ಪೋರ್ಟ್ ಹೊಂದಿರುವ ಅಥವ (ii) ಭಾರತ ಸಂವಿಧಾನದ ಅಥವಾ ಪೌರತ್ವ ಅಧಿನಿಯಮ, 1955 ರ (1955ರ 57) ಮೇರೆಗೆ ಭಾರತದ ಪೌರನಾಗಿರುವ ಅಥವಾ ಆತನ ತಂದೆಯಾಗಲಿ ಇಲ್ಲವೆ ಆತನ ತಾತನಾಗಲಿ ಭಾರತದ ಪೌರನಾಗಿರುವ (ಪಾಕಿಸ್ತಾನದ ಅಥವಾ ಬಾಂಗ್ಲಾದೇಶದ ಅಥವಾ ಶ್ರೀಲಂಕಾದ ಅಥವಾ ಅಫಘಾನಿಸ್ತಾನದ ಅಥವಾ ಚೀನಾದ ಅಥವಾ ಇರಾನಿನ ಅಥವಾ ನೇಪಾಳದ ಅಥವಾ ಭೂತಾನದ ಪೌರನಾಗಿರದ) ವ್ಯಕ್ತಿ.

4. ಸಾಮಾನ್ಯ ಅನುಮತಿಯ ಮೇರೆಗೆ ನಿವಾಸದ/ವಾಣಿಜ್ಯದ ಸ್ವತ್ತನ್ನು ಖರೀದಿಸಿದ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಯಾವುದೇ ದಸ್ತಾವೇಜುಗಳನ್ನು ಸಲ್ಲಿಸುವ ಅಗತ್ಯವಿದೆಯೇ?

ಸಾಮಾನ್ಯ ಅನುಮತಿಯ ಮೇರೆಗೆ ನಿವಾಸದ/ವಾಣಿಜ್ಯದ ಸ್ವತ್ತನ್ನು ಖರೀದಿಸಿದ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಯಾವುದೇ ದಸ್ತಾವೇಜುಗಳನ್ನು ಸಲ್ಲಿಸುವ ಅಗತ್ಯವಿಲ್ಲ.

5. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಖರೀದಿಸಬಹುದಾದ ನಿವಾಸದ/ವಾಣಿಜ್ಯದ ಸ್ವತ್ತುಗಳ ಸಂಖ್ಯೆಯ ಬಗ್ಗೆ ಯಾವುದೇ ನಿರ್ಬಂಧವಿದೆಯೇ?

ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಖರೀದಿಸಬಹುದಾದ ನಿವಾಸದ/ವಾಣಿಜ್ಯದ ಸ್ವತ್ತುಗಳ ಸಂಖ್ಯೆಯ ಬಗ್ಗೆ ಯಾವುದೇ ನಿರ್ಬಂಧವಿರುವುದಿಲ್ಲ.

6. ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನ ಹೆಸರನ್ನು ಅನಿವಾಸಿ ಭಾರತಿಯನು/ ಭಾರತೀಯ ಮೂಲದ ವ್ಯಕ್ತಿಯು ಖರೀದಿಸಿದ ನಿವಾಸದ/ವಾಣಿಜ್ಯದ ಸ್ವತ್ತಿಗೆ ಎರಡನೆಯ ಧಾರಕನನ್ನಾಗಿ ಸೇರಿಸಬಹುದೇ?

ಇಲ್ಲ.

7. ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಖರೀದಿಯ ರೂಪದಲ್ಲಿ ಭಾರತದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಆರ್ಜಿಸಬಹುದೇ?

ಇಲ್ಲ. ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಪ್ರಕರಣ 2(ಝಡ್‌ಇ) ಮೇರೆಗೆ, 'ವರ್ಗಾವಣೆ' ಎಂಬ ಪದದ ಅರ್ಥ ವ್ಯಾಪ್ತಿಗೆ, ಇತರೆ ಜೊತೆಗೆ 'ಖರೀದಿ'ಯೂ ಸೇರಿದೆ. ಆದ್ದರಿಂದ, ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಖರೀದಿಯ ರೂಪದಲ್ಲಿ ಭಾರತದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಆರ್ಜಿಸುವಂತಿಲ್ಲ.

8. ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಭಾರತದಲ್ಲಿ ಭೋಗ್ಯದ ಮೇಲೆ ನಿವಾಸದ ಸ್ವತ್ತನ್ನು ಆರ್ಜಿಸಬಹುದೇ?

ಹೌದು. ಪಾಕಿಸ್ತಾನದ ಅಥವಾ ಬಾಂಗ್ಲಾದೇಶದ ಅಥವಾ ಶ್ರೀಲಂಕಾದ ಅಥವಾ ಅಫ್ಘಾನಿಸ್ತಾನದ ಅಥವಾ ಚೀನಾದ ಅಥವಾ ಇರಾನಿನ ಅಥವಾ ನೇಪಾಳದ ಅಥವಾ ಭೂತಾನದ ಪೌರನೂ ಸೇರಿದಂತೆ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಐದು ವರ್ಷಗಳಿಗೆ ಮೀರದಂತೆ ಭೋಗ್ಯದ ಮೇಲೆ ನಿವಾಸದ ಅನುಕೂಲಕ್ಕಾಗಿ ಮಾತ್ರ ಸ್ವತ್ತನ್ನು ಆರ್ಜಿಸಬಹುದು. ಇದಕ್ಕಾಗಿ ಆತನು/ಆಕೆಯು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮುಂಚಿತವಾಗಿಯೇ ಅನುಮತಿಯನ್ನು ಪಡೆಯುವ ಅಗತ್ಯವಿಲ್ಲ.

9. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು (ಅಂದರೆ ಅನಿವಾಸಿ ಭಾರತೀಯನು ಅಥವಾ ಭಾರತೀಯ ಮೂಲದ ವ್ಯಕ್ತಿಯು ಅಥವಾ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು) ಖರೀದಿಯ ರೂಪದಲ್ಲಿ ಭಾರತದಲ್ಲಿ ಕೃಷಿ ಭೂಮಿಯನ್ನು/ತೋಟಗಳನ್ನು / ತೋಟದಮನೆಯನ್ನು ಆರ್ಜಿಸಬಹುದೆ?

ಇಲ್ಲ. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಭಾರತದಲ್ಲಿ ಕೃಷಿ ಭೂಮಿಯನ್ನು/ ತೋಟಗಳನ್ನು / ತೋಟದಮನೆಯನ್ನು ಖರೀದಿಯ ರೂಪದಲ್ಲಿ ಆರ್ಜಿಸುವಂತಿಲ್ಲ.

III. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ದಾನದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ

10. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ದಾನದ ರೂಪದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಆರ್ಜಿಸಬಹುದೆ?

ಹೌದು. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಅನಿವಾಸಿ ಭಾರತೀಯನು/ ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯಿಂದ ಅಥವಾ ಅನಿವಾಸಿ ಭಾರತೀಯನಿಂದ ಅಥವಾ ಭಾರತೀಯ ಮೂಲದ ವ್ಯಕ್ತಿಯಿಂದ ದಾನದ ರೂಪದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಆರ್ಜಿಸಬಹುದು.

11. ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ದಾನದ ರೂಪದಲ್ಲಿ ಭಾರತದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಆರ್ಜಿಸಬಹುದೆ?

ಇಲ್ಲ. ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999 ಪ್ರಕರಣ 2(ಝಡ್‌ಇ) ಮೇರೆಗೆ **"ವರ್ಗಾವಣೆ"** ಎಂಬ ಪದದ ಅರ್ಥವ್ಯಾಪ್ತಿಗೆ ಇತರೆ ಜೊತೆಗೆ 'ದಾನ' ಎಂಬ ಅರ್ಥವೂ ಸೇರಿದೆ. ಆದ್ದರಿಂದ, ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ದಾನದ ರೂಪದಲ್ಲಿ ಭಾರತದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಆರ್ಜಿಸುವಂತಿಲ್ಲ.

12. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು (ಅಂದರೆ ಅನಿವಾಸಿ ಭಾರತೀಯನು ಅಥವಾ ಭಾರತೀಯ ಮೂಲದ ವ್ಯಕ್ತಿಯು ಅಥವಾ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು) ದಾನದ ರೂಪದಲ್ಲಿ ಭಾರತದಲ್ಲಿ ಕೃಷಿ ಭೂಮಿಯನ್ನು / ತೋಟಗಳನ್ನು / ತೋಟದಮನೆಯನ್ನು ಆರ್ಜಿಸಬಹುದೆ?

ಇಲ್ಲ. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ದಾನದ ರೂಪದಲ್ಲಿ ಭಾರತದಲ್ಲಿ ಕೃಷಿ ಭೂಮಿಯನ್ನು / ತೋಟಗಳನ್ನು / ತೋಟದಮನೆಯನ್ನು ಆರ್ಜಿಸುವಂತಿಲ್ಲ.

IV. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಪಿತ್ರಾರ್ಜಿತದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ

13. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು (ಅಂದರೆ ಅನಿವಾಸಿ ಭಾರತೀಯನು ಅಥವಾ ಭಾರತೀಯ ಮೂಲದ ವ್ಯಕ್ತಿಯು ಅಥವಾ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು) ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತ ರೂಪದಲ್ಲಿ ಆರ್ಜಿಸಿದ ಯಾವುದೇ ಸ್ಥಿರಾಸ್ತಿಯನ್ನು ಭಾರತದಲ್ಲಿ ಹೊಂದಬಹುದೆ?

ಹೌದು. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತ ರೂಪದಲ್ಲಿ ಆರ್ಜಿಸಿದ ಸ್ಥಿರಾಸ್ತಿಯನ್ನು ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಪ್ರಕರಣ 6(5)ರ ಉಪಬಂಧಗಳಿಗನುಸಾರವಾಗಿ ಹೊಂದಬಹುದು.

14. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು (ಅನಿವಾಸಿ ಭಾರತೀಯನು ಅಥವಾ ಭಾರತೀಯ ಮೂಲದ ವ್ಯಕ್ತಿಯು ಅಥವಾ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು) ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತ ರೂಪದಲ್ಲಿ ಆರ್ಜಿಸಿದ ಯಾವುದೇ ಸ್ಥಿರಾಸ್ತಿಯನ್ನು ಭಾರತದಲ್ಲಿ ಹೊಂದಬಹುದೆ?

ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತ ರೂಪದಲ್ಲಿ ಆರ್ಜಿಸಿದ ಯಾವುದೇ ಸ್ಥಿರಾಸ್ತಿಯನ್ನು ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟ ಅನುಮೋದನೆ ಪಡೆದು ಭಾರತದಲ್ಲಿ ಹೊಂದಬಹುದು. ಆದರೆ, ಉಯಿಲುದಾರನು ಆರ್ಜನೆಯ ಸಮಯದಲ್ಲಿ ಜಾರಿಯಲ್ಲಿರುವ ವಿದೇಶಿ ವಿನಿಮಯ ಕಾನೂನಿನ ಉಪಬಂಧಗಳಿಗನುಸಾರವಾಗಿ ಅಥವಾ ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮದ ನಿಯಂತ್ರಣಗಳ ಪ್ರಕಾರ ಅಂತಹ ಆಸ್ತಿಯನ್ನು ಆರ್ಜಿಸಿರಬೇಕು.

V. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಮಾರಾಟದ ರೂಪದಲ್ಲಿ ಭಾರತದಲ್ಲಿ ಸ್ಥಿರಾಸ್ತಿಯ ವರ್ಗಾವಣೆ

15. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಅನಿವಾಸಿ ಭಾರತೀಯನು ತನ್ನ ನಿವಾಸದ/ ವಾಣಿಜ್ಯದ ಸ್ವತ್ತನ್ನು ಮಾರಾಟದ ರೂಪದಲ್ಲಿ ಯಾರಿಗೆ ವರ್ಗಾವಣೆ ಮಾಡಬಹುದು?

ಅನಿವಾಸಿ ಭಾರತೀಯನು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಅಥವಾ ಅನಿವಾಸಿ ಭಾರತೀಯನಿಗೆ ಅಥವಾ ಭಾರತೀಯ ಮೂಲದ ವ್ಯಕ್ತಿಗೆ ಮಾತ್ರ ಭಾರತದಲ್ಲಿನ ನಿವಾಸದ/ವಾಣಿಜ್ಯದ ಸ್ವತ್ತನ್ನು ಮಾರಾಟದ ರೂಪದಲ್ಲಿ ವರ್ಗಾಯಿಸಬಹುದು.

16. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಭಾರತೀಯ ಮೂಲದ ವ್ಯಕ್ತಿಯು ಮಾರಾಟದ ರೂಪದಲ್ಲಿ ಯಾರಿಗೆ ತನ್ನ ನಿವಾಸದ/ ವಾಣಿಜ್ಯದ ಸ್ವತ್ತನ್ನು ವರ್ಗಾಯಿಸಬಹುದು?

ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಮಾತ್ರ ಭಾರತದಲ್ಲಿನ ತನ್ನ ನಿವಾಸದ/ ವಾಣಿಜ್ಯದ ಸ್ವತ್ತನ್ನು ಮಾರಾಟದ ರೂಪದಲ್ಲಿ ವರ್ಗಾಯಿಸಬಹುದು.

17. ಭಾರತೀಯ ಮೂಲದ ವ್ಯಕ್ತಿಯು ಅನಿವಾಸಿ ಭಾರತೀಯನಿಗೆ ಅಥವಾ ಭಾರತೀಯ ಮೂಲದ ವ್ಯಕ್ತಿಗೆ ತನ್ನ ನಿವಾಸದ/ ವಾಣಿಜ್ಯದ ಸ್ವತ್ತನ್ನು ಮಾರಾಟದ ರೂಪದಲ್ಲಿ ವರ್ಗಾಯಿಸಬಹುದೆ?

ಇಲ್ಲ. ಆತನು ಅನಿವಾಸಿ ಭಾರತೀಯನಿಗೆ ಅಥವಾ ಭಾರತೀಯ ಮೂಲದ ವ್ಯಕ್ತಿಗೆ, ಭಾರತದಲ್ಲಿನ ನಿವಾಸದ/ ವಾಣಿಜ್ಯದ ಸ್ವತ್ತನ್ನು ಮಾರಾಟದ ರೂಪದಲ್ಲಿ ವರ್ಗಾಯಿಸುವುದಕ್ಕಾಗಿ ರಿಸರ್ವ್ ಬ್ಯಾಂಕ್‌ನಿಂದ ಮುಂಚಿತವಾಗಿಯೇ ಅನುಮೋದನೆ ಪಡೆಯಬೇಕು.

18. ಭಾರತದಲ್ಲಾಗಲೀ ಅಥವಾ ಭಾರತದ ಹೊರಗಡೆಯಲ್ಲಾಗಲೀ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟ ಅನುಮತಿ ಪಡೆದು ಆರ್ಜಿಸಿದ ಭಾರತದಲ್ಲಿನ ನಿವಾಸದ ಸ್ವತ್ತನ್ನು ಭಾರತದಲ್ಲಿ ಅಥವಾ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಗೆ ಮಾರಾಟದ ರೂಪದಲ್ಲಿ ವರ್ಗಾಯಿಸಬಹುದೆ?

ಇಲ್ಲ. ಭಾರತದಲ್ಲಿಯಾಗಲೀ ಇಲ್ಲವೇ ಭಾರತದ ಹೊರಗಡೆಯಲ್ಲಾಗಲೀ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟ ಅನುಮತಿ ಪಡೆದು ಭಾರತದಲ್ಲಿ ಆರ್ಜಿಸಿದ ನಿವಾಸದ ಸ್ವತ್ತನ್ನು ಭಾರತದಲ್ಲಿ ಅಥವಾ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಗೆ ಮಾರಾಟದ ರೂಪದಲ್ಲಿ ವರ್ಗಾಯಿಸುವುದಕ್ಕಾಗಿ, ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರುವ ಅಗತ್ಯವಿದೆ.

19. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿರುವ ತನ್ನ ಕೃಷಿ ಭೂಮಿಯನ್ನು/ತೋಟದ ಆಸ್ತಿಯನ್ನು/ತೋಟದ ಮನೆಯನ್ನು ಮಾರಾಟದ ರೂಪದಲ್ಲಿ ಯಾರಿಗೆ ವರ್ಗಾಯಿಸಬಹುದು?

ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದ ಪೌರನಾಗಿರುವ, ಮತ್ತು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಭಾರತಲ್ಲಿರುವ ತನ್ನ ಕೃಷಿ ಭೂಮಿಯನ್ನು/ತೋಟದ ಆಸ್ತಿಯನ್ನು/ತೋಟದ ಮನೆಯನ್ನು ಮಾರಾಟದ ರೂಪದಲ್ಲಿ ವರ್ಗಾಯಿಸಬಹುದು.

20. ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಭಾರತದಲ್ಲಿ ತಾನು ಆರ್ಜಿಸಿದ ಕೃಷಿ ಭೂಮಿಯನ್ನು/ ತೋಟದ ಆಸ್ತಿಯನ್ನು/ತೋಟದ ಮನೆಯನ್ನು ಮಾರಾಟದ ರೂಪದಲ್ಲಿ ವರ್ಗಾಯಿಸಬಹುದೆ?

ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು, ಭಾರತದಲ್ಲಿ ಆರ್ಜಿಸಿದ ಕೃಷಿ ಭೂಮಿಯನ್ನು / ತೋಟದ ಆಸ್ತಿಯನ್ನು / ತೋಟದ ಮನೆಯನ್ನು ಮಾರಾಟದ ರೂಪದಲ್ಲಿ ವರ್ಗಾಯಿಸುವುದಕ್ಕಾಗಿ ಮುಂಚಿತವಾಗಿಯೇ ರಿಸರ್ವ್ ಬ್ಯಾಂಕ್‌ನ ಅನುಮೋದನೆ ಕೋರುವ ಅಗತ್ಯವಿದೆ.

VI ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ದಾನದ ರೂಪದಲ್ಲಿ ಭಾರತದಲ್ಲಿನ ಸ್ಥಿರಾಸ್ತಿಯ ವರ್ಗಾವಣೆ

21. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ದಾನದ ರೂಪದಲ್ಲಿ ತನ್ನ ನಿವಾಸದ/ವಾಣಿಜ್ಯದ ಸ್ವತ್ತನ್ನು ವರ್ಗಾಯಿಸಬಹುದೆ?

ಹೌದು. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಅಥವಾ ಅನಿವಾಸಿ ಭಾರತೀಯನಿಗೆ ಅಥವಾ ಭಾರತೀಯ ಮೂಲದ ವ್ಯಕ್ತಿಗೆ ಭಾರತದಲ್ಲಿನ ತನ್ನ ನಿವಾಸದ/ವಾಣಿಜ್ಯದ ಸ್ವತ್ತನ್ನು ದಾನದ ರೂಪದಲ್ಲಿ ವರ್ಗಾಯಿಸಬಹುದು.

22. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿರುವ ತನ್ನ ಕೃಷಿ ಭೂಮಿಯನ್ನು / ತೋಟದ ಆಸ್ತಿಯನ್ನು/ತೋಟದ ಮನೆಯನ್ನು ದಾನದ ರೂಪದಲ್ಲಿ ಯಾರಿಗೆ ವರ್ಗಾಯಿಸಬಹುದು?

ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದ ಪೌರನಾಗಿರುವ, ಮತ್ತು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಭಾರತದಲ್ಲಿನ ತನ್ನ ಕೃಷಿ ಭೂಮಿಯನ್ನು / ತೋಟದ ಆಸ್ತಿಯನ್ನು/ತೋಟದ ಮನೆಯನ್ನು ದಾನದ ರೂಪದಲ್ಲಿ ವರ್ಗಾಯಿಸಬಹುದು.

23. ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಭಾರತದಲ್ಲಿ ತಾನು ಆರ್ಜಿಸಿದ ಕೃಷಿ ಭೂಮಿಯನ್ನು / ತೋಟದ ಆಸ್ತಿಯನ್ನು/ತೋಟದ ಮನೆಯನ್ನು ದಾನದ ರೂಪದಲ್ಲಿ ವರ್ಗಾಯಿಸಬಹುದೆ?

ಇಲ್ಲ. ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು, ಭಾರತದಲ್ಲಿ ತಾನು ಆರ್ಜಿಸಿದ ಕೃಷಿ ಭೂಮಿಯನ್ನು / ತೋಟದ ಆಸ್ತಿಯನ್ನು/ತೋಟದ ಮನೆಯನ್ನು ದಾನದ ರೂಪದಲ್ಲಿ ವರ್ಗಾಯಿಸುವುದಕ್ಕಾಗಿ ಮುಂಚಿತವಾಗಿಯೇ ರಿಸರ್ವ್ ಬ್ಯಾಂಕ್‌ನ ಅನುಮೋದನೆ ಕೋರುವ ಅಗತ್ಯವಿದೆ.

VII. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಅಡಮಾನದ ರೂಪದಲ್ಲಿ ಭಾರತದಲ್ಲಿನ ನಿವಾಸದ/ ವಾಣಿಜ್ಯದ ಸ್ವತ್ತಿನ ವರ್ಗಾವಣೆ

24. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿನ ಅಧಿಕೃತ ವ್ಯಾಪಾರಿಗೆ (ADS)/ಗೃಹ ನಿರ್ಮಾಣ ಹಣಕಾಸು ಸಂಸ್ಥೆಗೆ ತನ್ನ ನಿವಾಸದ/ವಾಣಿಜ್ಯದ ಸ್ವತ್ತನ್ನು ಅಡಮಾನದ ರೂಪದಲ್ಲಿ ವರ್ಗಾಯಿಸಬಹುದೆ?

ಹೌದು.

25. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ವಿದೇಶದ ಪಕ್ಷಕಾರನಿಗೆ ಭಾರತದಲ್ಲಿನ ತನ್ನ ನಿವಾಸದ/ವಾಣಿಜ್ಯದ ಸ್ವತ್ತನ್ನು ಅಡಮಾನದ ರೂಪದಲ್ಲಿ ವರ್ಗಾಯಿಸಬಹುದೆ?

ಇಲ್ಲ. ಆತನು ಮುಂಚಿತವಾಗಿಯೇ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರತಕ್ಕದ್ದು.

26. ಭಾರತದಲ್ಲಿ ಅಥವಾ ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟ ಅನುಮೋದನೆ ಪಡೆದು ಆರ್ಜಿಸಲಾದ ಭಾರತದಲ್ಲಿನ ತನ್ನ ನಿವಾಸದ/ವಾಣಿಜ್ಯದ ಸ್ವತ್ತನ್ನು ಭಾರತದಲ್ಲಿನ ಅಥವಾ ವಿದೇಶದಲ್ಲಿನ ಪಕ್ಷಕಾರನಿಗೆ ಅಡಮಾನದ ರೂಪದಲ್ಲಿ ವರ್ಗಾಯಿಸಬಹುದೆ?

ಇಲ್ಲ. ಆತನು ಮುಂಚಿತವಾಗಿಯೇ ಭಾರತೀಯ ರಿಸರ್ವ್ ಬ್ಯಾಂಕ್‌ನ ಅನುಮೋದನೆ ಕೋರಬೇಕು. ಆದರೂ, ಫೆರಾ/ಫೆಮಾ ನಿಯಂತ್ರಣಗಳಿಗನುಸಾರವಾಗಿ ಯಾವುದೇ ಚಟುವಟಿಕೆಯನ್ನು ಭಾರತದಲ್ಲಿ ನಡೆಸುವುದಕ್ಕಾಗಿ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಶಾಖಾ ಕಚೇರಿಯನ್ನು ಅಥವಾ ವ್ಯವಹಾರದ ಇತರ ಸ್ಥಳವನ್ನು ಸ್ಥಾಪಿಸಿದ್ದರೆ ಆತನು ತಾನು ಖರೀದಿಸಿದ ಸ್ಥಿರಾಸ್ತಿಯನ್ನು, ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಯಾವುದೇ ಸಾಲ ಪಡೆಯುವುದಕ್ಕಾಗಿ ಭದ್ರತೆಯಾಗಿ ಅಧಿಕೃತ ವ್ಯಾಪಾರಿಗೆ ಅಡಮಾನವಾಗಿಡಬಹುದು.

VIII ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಖರೀದಿ ಮಾಡಿದಾಗ ಹಣ ಸಂದಾಯದ ರೀತಿ

27. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಭಾರತದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಖರೀದಿ ಮಾಡಿದಾಗ ಹಣ ಸಂದಾಯದ ರೀತಿ ಯಾವುದು?

ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಯ ಮುಖಾಂತರ ಭಾರತಕ್ಕೆ ರವಾನಿಸಿದ ನಿಧಿಗಳಿಂದ ಅಥವಾ ತನ್ನ ಎನ್‌ಆರ್‌ಇ/ಎಫ್‌ಸಿಎನ್‌ಆರ್ (ಬಿ)/ಎನ್‌ಆರ್‌ಒ ಖಾತೆಯಲ್ಲಿರುವ ನಿಧಿಗಳಿಂದ ಭಾರತದಲ್ಲಿ ನಿವಾಸದ/ವಾಣಿಜ್ಯದ ಸ್ವತ್ತನ್ನು ಖರೀದಿಸಬಹುದು. ಭಾರತದ ಹೊರಗೆ ಇದನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

28. ಫ್ಲಾಟ್/ನಿವೇಶನವನ್ನು ಹಂಚಿಕೆ ಮಾಡದಿರುವ ಕಾರಣದಿಂದಾಗಿ/ನಿವಾಸದ/ವಾಣಿಜ್ಯದ ಸ್ವತ್ತಿನ ಖರೀದಿಗಾಗಿನ ಬುಕಿಂಗ್‌ಗಳ್ನು/ವ್ಯವಹಾರಗಳನ್ನು ರದ್ದುಪಡಿಸಿರುವ ಕಾರಣದಿಂದಾಗಿ ಗೃಹ ನಿರ್ಮಾಣ ಏಜೆನ್ಸಿಗಳು/ಮಾರಾಟಗಾರರು ಯಾವುದೇ (ಅದರ ಮೇಲೆ ಪಾವತಿಸಬೇಕಾದ ನಿವ್ವಳ ಆದಾಯ ತೆರಿಗೆ) ಬಡ್ಡಿಯೊಂದಿಗೆ ಮಾಡಿದ ಅರ್ಜಿ/ಮುಂಗಡ ಹಣ/ಖರೀದಿ ಪ್ರತಿಫಲದ ಮರುಪಾವತಿಯನ್ನು ಎನ್‌ಆರ್‌ಇ ಖಾತೆಗೆ ಜಮೆ ಮಾಡಬಹುದೆ?

ಹೌದು. ಆದರೆ, ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದ ಅಥವಾ ಎನ್‌ಆರ್‌ಇ/ ಎಫ್‌ಸಿಎನ್‌ಆರ್(ಬಿ) ಖಾತೆಗೆ ಖರ್ಚು ಹಾಕುವ ಮೂಲಕ ಮೂಲ ಸಂದಾಯವನ್ನು ಮಾಡಿರಬೇಕು. ಹೀಗೆ ಮಾಡಲು ರಿಸರ್ವ್ ಬ್ಯಾಂಕ್‌ನ ಅನುಮತಿ ಬೇಕಾಗಿರುವುದಿಲ್ಲ ಮತ್ತು ಅವರು ಈ ವಿಷಯವಾಗಿ ನೇರವಾಗಿ ಅಧಿಕೃತ ವ್ಯಾಪಾರಿಯನ್ನು ಸಂಪರ್ಕಿಸಬಹುದು (ದಯವಿಟ್ಟು ಎ.ಪಿ.(ಡಿಐಆರ್ ಶ್ರೇಣಿಗಳು) ಸುತ್ತೋಲೆ ಸಂ. 46 ದಿನಾಂಕ: ನವೆಂಬರ್ 12, 2002ನ್ನು ನೋಡಿ).

29. ತಾನೇ ಸ್ವತ: ವಾಸಿಸುವ ಸಲುವಾಗಿ ಭಾರತದಲ್ಲಿ ಫ್ಲಾಟ್ / ಮನೆಯನ್ನು ಆರ್ಜಿಸುವ ಉದ್ದೇಶಕ್ಕಾಗಿ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ತನ್ನ ಎನ್‌ಆರ್‌ಇ ನಿಶ್ಚಿತ ಠೇವಣಿ ಖಾತೆಯಲ್ಲಿ / ಎಫ್‌ಸಿಎನ್‌ಆರ್ (ಬಿ) ಖಾತೆಯಲ್ಲಿ ಹೊಂದಿರುವ ನಿಧಿಗಳನ್ನು ಭದ್ರತೆಯಾಗಿಟ್ಟು ಅಧಿಕೃತ ಡೀಲರ್‌ನಿಂದ / ವ್ಯಾಪಾರಿಯಿಂದ ಸಾಲವನ್ನು ಪಡೆಯಬಹುದೆ?

ಹೌದು, ಕೆಲವು ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಪಡೆಯಬಹುದು. (ದಯವಿಟ್ಟು ಅಧಿಸೂಚನೆ ಸಂ. ಎಫ್‌ಇಎಂಎ 5/2000–ಆರ್‌ಬಿಐ ದಿನಾಂಕ ಮೇ 3, 2000ದ ಅನುಸೂಚಿ 1 ಮತ್ತು ಅನುಸೂಚಿ 2 ಅನ್ನು ನೋಡಿ).

30. ಅನಿವಾಸಿ ಭಾರತೀಯನು / ಭಾರತೀಯ ಮೂಲದ ವ್ಯಕ್ತಿಯು, ನಿವಾಸದ ಖರೀದಿಗಾಗಿ ಅಥವಾ ನಿವಾಸದ ದುರಸ್ತಿ/ನವೀಕರಣ/ಅಭಿವೃದ್ಧಿಯ ಉದ್ದೇಶಕ್ಕಾಗಿ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಅನುಮೋದಿಸಲ್ಪಟ್ಟ ಭಾರತದಲ್ಲಿನ ಅಧಿಕೃತ ಡೀಲರ್‌ನಿಂದ / ವ್ಯಾಪಾರಿಯಿಂದ ಅಥವಾ ಗೃಹ ನಿರ್ಮಾಣ ಹಣಕಾಸು ಸಂಸ್ಥೆಯಿಂದ ರೂಪಾಯಿಗಳಲ್ಲಿ ಗೃಹ ಸಾಲವನ್ನು ಪಡೆಯಬಹುದೆ?

ಹೌದು. ಕೆಲವು ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಪಡೆಯಬಹುದು. ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಯ ಮುಖಾಂತರ ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದ ಅಥವಾ ತನ್ನ ಎನ್‌ಆರ್‌ಇ / ಎಫ್‌ಸಿಎನ್‌ಆರ್ (ಬಿ)/ಎನ್‌ಆರ್ ಒ ಖಾತೆಗೆ ಖರ್ಚು ಹಾಕುವ ಮೂಲಕ ಅಥವಾ ಅಂತಹ ಸ್ವತ್ತನ್ನು ಬಾಡಿಗೆ ಕೊಡುವುದರಿಂದ ಬರುವ ಬಾಡಿಗೆಯ ಆದಾಯದಿಂದ ಸಾಲಗಾರನು ಅಂಥ ಸಾಲವನ್ನು ಮರುಪಾವತಿಸಬಹುದು. ಭಾರತದಲ್ಲಿನ ತಮ್ಮ ಖಾತೆಯ ಮುಖಾಂತರ ಸಾಲಗಾರನ ಹತ್ತಿರದ ಸಂಬಂಧಿಗಳು ಕೂಡ ಸಾಲಗಾರನ ಸಾಲದ ಖಾತೆಗೆ ಜಮೆ ಮಾಡುವ ಮೂಲಕ ಅಂತಹ ಸಾಲವನ್ನು ಮರುಪಾವತಿ ಮಾಡಬಹುದು. (ದಯವಿಟ್ಟು ಅಧಿಸೂಚನೆ ಸಂ. ಎಫ್‌ಇಎಂಎ 4/2000–ಆರ್‌ಬಿ ದಿನಾಂಕ ಮೇ 3, 2000ದ ನಿಯಂತ್ರಣ 8 ಅನ್ನು ಮತ್ತು ಎ.ಪಿ. (ಡಿಐಆರ್ ಶ್ರೇಣಿಗಳು) ಸುತ್ತೋಲೆ ಸಂ. 95 ದಿನಾಂಕ ಏಪ್ರಿಲ್ 20, 2003 ಹಾಗೂ ಎ.ಪಿ. (ಡಿಐಆರ್ ಶ್ರೇಣಿಗಳು) ಸುತ್ತೋಲೆ ಸಂ.94 ದಿನಾಂಕ ಮೇ 25, 2005ಅನ್ನು ನೋಡಿ).

31. ಅನಿವಾಸಿ ಭಾರತೀಯನು ಭಾರತದಲ್ಲಿನ ತನ್ನ ಉದ್ಯೋಗದಾತನಿಂದ ರೂಪಾಯಿಗಳಲ್ಲಿ ಗೃಹ ಸಾಲವನ್ನು ಪಡೆಯಬಹುದೆ?

ಹೌದು. ಕೆಲವು ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಪಡೆಯಬಹುದು (ದಯವಿಟ್ಟು ಅಧಿಸೂಚನೆ ಸಂ. ಎಫ್‌ಇಎಂಎ 4/2000 ಆರ್‌ಬಿ ದಿನಾಂಕ ಮೇ 3, 2000ದ ನಿಯಂತ್ರಣ 8 ಎ ಅನ್ನು ಹಾಗೂ ಎ.ಪಿ.(ಡಿಐಆರ್) ಸುತ್ತೋಲೆ ಸಂ.27 ದಿನಾಂಕ ಅಕ್ಟೋಬರ್ 10, 2003 ಅನ್ನು ನೋಡಿ)

IX. ಅನಿವಾಸಿ ಭಾರತೀಯನು / ಭಾರತೀಯ ಮೂಲದ ವ್ಯಕ್ತಿಯು ಖರೀದಿಸಿದ ನಿವಾಸ / ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣವನ್ನು ವಾಪಸಾತಿ ಮಾಡುವುದು.

32. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಯ ಮುಖಾಂತರ ಭಾರತಕ್ಕೆ ರವಾನೆಯಾಗಿ ಬಂದ ಹಣದಿಂದ ಅಥವಾ ಎನ್‌ಆರ್‌ಇ/ಎಫ್‌ಸಿಎನ್‌ಆರ್(ಬಿ) ಖಾತೆಗೆ ಖರ್ಚು ಹಾಕುವ ಮೂಲಕ ಆರ್ಜಿಸಿದ ಭಾರತದಲ್ಲಿನ ನಿವಾಸದ/ವಾಣಿಜ್ಯ ಸ್ವತ್ತಿನ ಮಾರಾಟದ ಹಣವನ್ನು ವಾಪಸಾತಿ ಮಾಡಬಹುದೇ? ಹಾಗಿದ್ದಲ್ಲಿ, ಅದರ ಪ್ರಮಾಣವೆಷ್ಟು?

ಅನಿವಾಸಿ ಭಾರತೀಯನು/ಭಾರತೀಯ ಮೂಲಕ ವ್ಯಕ್ತಿಯು ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಯ ಮುಖಾಂತರ ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದ ಅಥವಾ ಎನ್‌ಆರ್‌ಇ/ಎಫ್‌ಸಿಎನ್‌ಆರ್ (ಬಿ) ಖಾತೆಗೆ ಖರ್ಚು ಹಾಕುವ ಮೂಲಕ ಆರ್ಜಿಸಿದ ಭಾರತದಲ್ಲಿನ ನಿವಾಸದ/ವಾಣಿಜ್ಯ ಸ್ವತ್ತಿನ ಮಾರಾಟದ ಹಣವನ್ನು ತಾನಿರುವ ದೇಶಕ್ಕೆ ಕಳುಹಿಸಬಹುದು. ಕಳುಹಿಸಬೇಕಾದ ಮೊಬಲಗು, (ಎ) ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಅಥವಾ ಎಫ್‌ಸಿಎನ್‌ಆರ್(ಬಿ) ಖಾತೆಗೆ ಖರ್ಚು ಹಾಕುವ ಮೂಲಕ ಪಡೆಯಲಾದ ವಿದೇಶಿ ವಿನಿಯಮ ಹಣದಲ್ಲಿ ಅಥವಾ (ಬಿ) ಸಂದಾಯ ಮಾಡಿದ ದಿನಾಂಕದಂದು ಇದ್ದಂತೆ, ಎನ್‌ಆರ್‌ಇ ಖಾತೆಗೆ ಖರ್ಚು ಹಾಕುವ ಮೂಲಕ ಸಂದಾಯ ಮಾಡಲಾದ ಮೊಬಲಗಿಗೆ ಸಮಾನವಾದ ವಿದೇಶಿ ಕರೆನ್ಸಿಯಲ್ಲಿ, ನಿವಾಸ / ವಾಣಿಜ್ಯ ಸ್ವತ್ತಿನ ಆರ್ಜನೆಗಾಗಿ, ಸಂದಾಯ ಮಾಡಲಾದ ಮೊಬಲಗನ್ನು ಮೀರಬಾರದು.

ಆತನು, ಅಂತಹ ಸ್ಥಿರಾಸ್ತಿಯನ್ನು 10 ವರ್ಷಗಳ ಕಾಲ ಹೊಂದಿದ್ದ ನಂತರ ಮಾರಾಟ ಮಾಡಿದ್ದಲ್ಲಿ ಅದರ ಮಾರಾಟದಿಂದ ಬಂದ ಹಣವೂ ಸೇರಿದಂತೆ ಅರ್ಹ ಶಿಲ್ಕುಗಳನ್ನು ಎನ್‌ಆರ್‌ಒ ಖಾತೆಯಲ್ಲಿನ ಶಿಲ್ಕುಗಳಿಂದ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಒಂದು ಮಿಲಿಯನ್ ಅಮೇರಿಕಾ ಡಾಲರ್‌ವರೆಗೆ ರವಾನಿಸಬಹುದು. ಅಂತಹ ಆಸ್ತಿಯನ್ನು 10 ವರ್ಷಗಳಿಗಿಂತ ಕಡಿಮೆ ಅವಧಿಗೆ ಹೊಂದಿದ್ದಲ್ಲಿ, ಮಾರಾಟದಿಂದ ಬಂದ ಹಣವನ್ನು, ಎನ್‌ಆರ್‌ಒ ಖಾತೆ

(ಉಳಿತಾಯ/ಸಾವಧಿಕ ಠೇವಣಿ)ಯಲ್ಲಿನ ಬಾಕಿ ಅವಧಿಗಾಗಿ ಅಥವಾ ಇತರ ಯಾವುದೇ ಅರ್ಹ ಹೂಡಿಕೆಗಾಗಿ ಇಟ್ಟಿಕೊಂಡಿದ್ದರೆ ಹಣದ ರವಾನೆಯನ್ನು ಮಾಡಬಹುದು. ಆದರೆ, ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣದಿಂದ ಅಂತಹ ಹೂಡಿಕೆ ಮಾಡಲಾಗಿದೆಯೆಂಬುದು ಕಂಡು ಬರಬೇಕು. (ವಿವರಗಳಿಗಾಗಿ ದಯವಿಟ್ಟು ತಿದ್ದುಪಡಿ ಮಾಡಲಾದಂತಹ ಎಫ್ಇಎಂಎ 13 ದಿನಾಂಕ ಮೇ 3, 2000ದ ನಿಯಂತ್ರಣ' 4(3) ಅನ್ನು ನೋಡಿ)

33. ನಿವಾಸದ ಖರೀದಿಗಾಗಿ ಅನಿವಾಸಿ ಭಾರತೀಯನು ಪಡೆದ ರೂಪಾಯಿ ಸಾಲ ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದಾಗಲೀ ಅಥವಾ ಎನ್ಆರ್ಇ/ಎಫ್ಸಿಎನ್ಆರ್ (ಬಿ) ಖಾತೆಗೆ ಖರ್ಚು ಹಾಕುವ ಮೂಲಕವಾಗಲಿ ಮರು ಪಾವತಿಯಾಗಿದ್ದಲ್ಲಿ, ಅಂಥ ಆಸ್ತಿಯ ಮಾರಾಟದಿಂದ ಬಂದ ಹಣವನ್ನು ತಾನಿರುವ ದೇಶಕ್ಕೆ ಕಳುಹಿಸಬಹುದೆ?

ಹೌದು. ವಿದೇಶಿ ವಿನಿಮಯದಲ್ಲಿ ಸಾಲದ ಮರು ಪಾವತಿಯನ್ನು ನಿವಾಸದ ಖರೀದಿಗಾಗಿ ಪಡೆಯಲಾದ ವಿದೇಶಿ ವಿನಿಮಯಕ್ಕೆ ಸಮನೆಂದು ಪರಿಗಣಿಸಲಾಗುತ್ತದೆ.

34. ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದ ಎನ್ಆರ್ಇ/ಎಫ್ಸಿಎನ್ಆರ್ (ಬಿ) ಖಾತೆಗೆ ಖರ್ಚು ಹಾಕುವ ಮೂಲಕ ಖರೀದಿಸಲಾದ ನಿವಾಸ/ವಾಣಿಜ್ಯ ಸ್ವತ್ತಿನ ಮಾರಾಟಕ್ಕಾಗಿ ಯಾವುದಾದರೂ ಅವಧಿ ನಿರ್ಬಂಧ ಇದೆಯೆ?

ಅಂತಹ ಆಸ್ತಿಯ ಮಾರಾಟಕ್ಕಾಗಿ ಯಾವುದೇ ಅವಧಿ ನಿರ್ಬಂಧ ಅನ್ವಯವಾಗುವುದಿಲ್ಲ.

35. ಯಾವ ನಿವಾಸದ ಸ್ವತ್ತುಗಳ ಮಾರಾಟದಿಂದ ಬಂದ ಹಣವನ್ನು ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ತಾನಿರುವ ದೇಶಕ್ಕೆ ಕಳುಹಿಸಬಹುದಾಗಿದೆಯೋ ಅಂತಹ ನಿವಾಸದ ಆಸ್ತಿಗಳ ಸಂಖ್ಯೆಯ ಬಗ್ಗೆ ಯಾವುದಾದರೂ ನಿರ್ಬಂಧವಿದೆಯೆ?

ಹೌದು. ಎರಡಕ್ಕಿಂತ ಹೆಚ್ಚಿನ ನಿವಾಸದ ಆಸ್ತಿಗಳ ಮಾರಾಟದಿಂದ ಬಂದ ಹಣವನ್ನು ತಾನಿರುವ ದೇಶಕ್ಕೆ ಕಳುಹಿಸುವುದಕ್ಕೆ ನಿರ್ಬಂಧವಿದೆ.

X. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ದಾನದ ರೂಪದಲ್ಲಿ ಪಡೆದ ನಿವಾಸ/ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣದ ರವಾನೆ.

36. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ದಾನದ ರೂಪದಲ್ಲಿ ಪಡೆದ ನಿವಾಸ/ ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣವನ್ನು ಯಾವ ಖಾತೆಗೆ ಜಮೆ ಮಾಡಬಹುದು?

ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ದಾನದ ರೂಪದಲ್ಲಿ ಪಡೆದ ನಿವಾಸ/ವಾಣಿಜ್ಯ ಸ್ವತ್ತಿನ ಮಾರಾಟದಿಂದ ಬಂದ ಹಣವನ್ನು ಎನ್ಆರ್ಓ ಖಾತೆಗೆ ಮಾತ್ರ ಜಮಾ ಮಾಡಬೇಕು.

XI. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಪಿತ್ರಾರ್ಜಿತವಾಗಿ ಬಂದ ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ರವಾನಿಸುವುದು

37. ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯಿಂದ ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ಪಿತ್ರಾರ್ಜಿತವಾಗಿ ಪಡೆದ ಯಾವುದೇ ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ವಿದೇಶಕ್ಕೆ ರವಾನಿಸಬಹುದೆ?

ಹೌದು. ಪಿತ್ರಾರ್ಜಿತ ಎಂಬುದಕ್ಕೆ ಸಮರ್ಥನೆ ಒದಗಿಸುವ ದಸ್ತಾವೇಜಿನ ಸಾಕ್ಷ್ಯವನ್ನು ಹಾಗೂ ಆದಾಯ ತೆರಿಗೆ ಪ್ರಾಧಿಕಾರದಿಂದ ಪಡೆದ ತೆರಿಗೆ ಪಾವತಿ ಪ್ರಮಾಣಪತ್ರವನ್ನು/ನಿರಾಕ್ಷೇಪಣಾ ಪತ್ರವನ್ನು ಹಣ ರವಾನೆ ಅಧಿಕೃತ ವ್ಯಾಪಾರಿಗೆ ಸಲ್ಲಿಸುವುದಕ್ಕೆ ಒಳಪಟ್ಟು, ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಒಂದು ಮಿಲಿಯನ್ ಅಮೇರಿಕಾ ಡಾಲರನ್ನು ಮೀರದ ಮೊತ್ತವನ್ನು ರವಾನಿಸಬಹುದು. ಆದರೆ, ಭಾರತೀಯ ಮೂಲದ ವ್ಯಕ್ತಿಯು, ಪಾಕಿಸ್ತಾನದ ಅಥವಾ

ಬಾಂಗ್ಲಾದೇಶದ ಅಥವಾ ಶ್ರೀಲಂಕಾದ ಅಥವಾ ಅಫಘಾನಿಸ್ತಾನದ ಅಥವಾ ಚೀನಾದ ಅಥವಾ ಇರಾನಿನ ಪೌರನಾಗಿದ್ದಲ್ಲಿ ಆತನು, ಪಿತ್ರಾರ್ಜಿತ ಎಂಬುದಕ್ಕೆ ಸಮರ್ಥನೆ ಒದಗಿಸುವ ದಸ್ತಾವೇಜಿಯ ಸಾಕ್ಷ್ಯ ಹಾಗೂ ಆದಾಯ ತೆರಿಗೆ ಪ್ರಾಧಿಕಾರದಿಂದ ಪಡೆದ ತೆರಿಗೆ ಪಾವತಿ/ನಿರಾಕ್ಷೇಪಣಾ ಪ್ರಮಾಣಪತ್ರ ಇವೆಲ್ಲವನ್ನೂ ಸಲ್ಲಿಸಿ ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರಬೇಕು. ಈ ಹಣ ರವಾನೆ ಸೌಲಭ್ಯವು ನೇಪಾಳ ಅಥವಾ ಭೂತಾನ್ ದೇಶದ ಪೌರನಿಗೆ ದೊರೆಯುವುದಿಲ್ಲ. (ದಯವಿಟ್ಟು ಅಧಿಸೂಚನೆ ಸಂಖ್ಯೆ ಎಫ್ಇಎಂಎ 13/ಆರ್‌ಬಿ–2000 ದಿನಾಂಕ ಮೇ 3, 2000ದ ನಿಯಂತ್ರಣ 4(3)ಅನ್ನು ನೋಡಿ)

38. ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯಿಂದ ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು ಪಿತ್ರಾರ್ಜಿತವಾಗಿ ಪಡೆದ ಭಾರತದಲ್ಲಿನ ಯಾವುದೇ ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ತಾನಿರುವ ದೇಶಕ್ಕೆ ಕಳುಹಿಸಬಹುದೆ?

ಹೌದು. ಪಿತ್ರಾರ್ಜಿತ ಎಂಬುದಕ್ಕೆ ಸಮರ್ಥನೆ ಒದಗಿಸುವ ದಸ್ತಾವೇಜಿನ ಸಾಕ್ಷ್ಯವನ್ನು ಹಾಗೂ ಆದಾಯ ತೆರಿಗೆ ಪ್ರಾಧಿಕಾರದಿಂದ ಪಡೆದ ತೆರಿಗೆ ಪಾವತಿ ಪ್ರಮಾಣ ಪತ್ರವನ್ನು/ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಹಣ ರವಾನೆ ಅಧಿಕೃತ ವ್ಯಾಪಾರಿಗೆ ಸಲ್ಲಿಸುವುದಕ್ಕೆ ಒಳಪಟ್ಟು, ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಒಂದು ಮಿಲಿಯನ್ ಅಮೇರಿಕಾ ಡಾಲರನ್ನು ಮೀರದ ಮೊತ್ತವನ್ನು ತಾನಿರುವ ದೇಶಕ್ಕೆ ಕಳುಹಿಸಬಹುದು. ಆದರೂ, ಭಾರತೀಯ ಮೂಲದ ವ್ಯಕ್ತಿಯು, ಪಾಕಿಸ್ತಾನದ ಅಥವಾ ಬಾಂಗ್ಲಾದೇಶದ ಅಥವಾ ಶ್ರೀಲಂಕಾದ ಅಥವಾ ಅಫಘಾನಿಸ್ತಾನದ ಅಥವಾ ಚೀನಾದ ಅಥವಾ ಇರಾನಿನ ಪೌರನಾಗಿದ್ದಲ್ಲಿ, ಆತನು, ಪಿತ್ರಾರ್ಜಿತ ಎಂಬುದಕ್ಕೆ ಸಮರ್ಥನೆ ಒದಗಿಸುವ ದಸ್ತಾವೇಜಿನ ಸಾಕ್ಷ್ಯ ಹಾಗೂ ಆದಾಯ ತೆರಿಗೆ ಪ್ರಾಧಿಕಾರದಿಂದ ಪಡೆದ ತೆರಿಗೆ ಪಾವತಿ/ನಿರಾಕ್ಷೇಪಣಾ ಪ್ರಮಾಣಪತ್ರ ಇವೆಲ್ಲವನ್ನೂ ಸಲ್ಲಿಸಿ, ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರಬೇಕು. ಈ ಹಣ ರವಾನೆ ಸೌಲಭ್ಯವು ನೇಪಾಳ ಅಥವಾ ಭೂತಾನ್ ದೇಶದ ಪೌರನಿಗೆ ದೊರೆಯುವುದಿಲ್ಲ. (ದಯವಿಟ್ಟು ಅಧಿಸೂಚನೆ ಸಂಖ್ಯೆ ಎಫ್ಇಎಂಎ 13/ಆರ್‌ಬಿ–2000 ದಿನಾಂಕ ಮೇ 3, 2000ದ ನಿಯಂತ್ರಣ 4(2)ಅನ್ನು ನೋಡಿ)

39. ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯಿಂದ ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು (ಅಂದರೆ ಅನಿವಾಸಿ ಭಾರತೀಯನು ಅಥವಾ ಭಾರತೀಯ ಮೂಲದ ವ್ಯಕ್ತಿಯು ಅಥವಾ ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವನಲ್ಲದ ವಿದೇಶಿ ರಾಷ್ಟ್ರೀಯನು) ಪಿತ್ರಾರ್ಜಿತವಾಗಿ ಪಡೆದ ಭಾರತದಲ್ಲಿನ ಯಾವುದೇ ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ಆತನಾಗಲಿ ಅಥವಾ ಆತನ ವಾರಸುದಾರನಾಗಲಿ ಆತನಿರುವ ದೇಶಕ್ಕೆ ಕಳುಹಿಸಬಹುದೆ?

ಇಲ್ಲ. ಆತನು, ಪಿತ್ರಾರ್ಜಿತ ಎಂಬುದಕ್ಕೆ ಸಮರ್ಥನೆ ಒದಗಿಸುವ ದಸ್ತಾವೇಜಿನ ಸಾಕ್ಷ್ಯ ಹಾಗೂ ಆದಾಯ ತೆರಿಗೆ ಪ್ರಾಧಿಕಾರದಿಂದ ಪಡೆದ ತೆರಿಗೆ ಪಾವತಿ/ನಿರಾಕ್ಷೇಪಣಾ ಪ್ರಮಾಣಪತ್ರ ಇವೆಲ್ಲವನ್ನೂ ಸಲ್ಲಿಸಿ, ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರುವುದು ಅಗತ್ಯ.

XII. ಭಾರತದಲ್ಲಿ ಅನುಮತಿಸಲಾದ ಕಾರ್ಯ ಚಟುವಟಿಕೆಯನ್ನು ನಡೆಸುವುದಕ್ಕಾಗಿ ಸ್ಥಿರಾಸ್ತಿಯ ಆರ್ಜನೆ.

40. ಫೆರಾ/ಫೆಮಾ ನಿಬಂಧನೆಗಳಿಗನುಸಾರವಾಗಿ ಭಾರತದಲ್ಲಿ ಸಂಪರ್ಕ ಕಚೇರಿಯನ್ನು ಸ್ಥಾಪಿಸಿರುವ, ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಸ್ಥಿರಾಸ್ತಿಯನ್ನು ಖರೀದಿಸಬಹುದೆ?

ಇಲ್ಲ.

41. ಫೆರಾ/ಫೆಮಾ ನಿಬಂಧನೆಗಳಿಗನುಸಾರವಾಗಿ ಭಾರತದಲ್ಲಿ ವ್ಯವಹಾರದ ಶಾಖಾ ಕಛೇರಿಯನ್ನು ಅಥವಾ ವ್ಯವಹಾರಕ್ಕಾಗಿ ಇತರ ಸ್ಥಳವನ್ನು ಸ್ಥಾಪಿಸಿರುವ, ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿಯು ಸ್ಥಿರಾಸ್ತಿಯನ್ನು ಖರೀದಿಸಬಹುದೆ?

ಹೌದು, ಆದರೆ, ಅದು ಅಂತಹ ಕಾರ್ಯಚಟುವಟಿಕೆಯನ್ನು ನಡೆಸುವುದಕ್ಕೆ ಅವಶ್ಯಕವಾಗಿರಬೇಕು ಅಥವಾ ಅದಕ್ಕೆ ಪ್ರಾಸಂಗಿಕವಾಗಿರಬೇಕು ಮತ್ತು ಅನ್ವಯವಾಗುವ ಎಲ್ಲ ಕಾನೂನುಗಳ, ನಿಯಮಗಳ, ವಿನಿಯಮನಗಳ ಅಥವಾ ನಿರ್ದೇಶನಗಳ ಯುಕ್ತ ಪಾಲನೆ ಆಗಿರಬೇಕು. ಖರೀದಿಯ ಬೆಲೆಯನ್ನು ಸಮರ್ಪಕ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಇಲ್ಲಿಗೆ ರವಾನೆಯಾಗಿ ಬಂದ ಹಣದಿಂದ ಸಂದಾಯ ಮಾಡಬೇಕು. ಐಪಿಐ ನಮೂನೆಯಲ್ಲಿ ಘೋಷಣೆಯನ್ನು, ವಾಣಿಜ್ಯ/ನಿವಾಸದ ಆಸ್ತಿಯ ಆರ್ಜನೆಯ ದಿನಾಂಕದಿಂದ ತೊಂಭತ್ತು ದಿನಗಳೊಳಗಾಗಿ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕು.

42. ಪ್ರಶ್ನೆ ಸಂಖ್ಯೆ 41 ರಲ್ಲಿ ಉಲ್ಲೇಖಿಸಲಾದಂತಹ ಆಸ್ತಿಯನ್ನು ಯಾವುದೇ ಸಾಲವನ್ನು ಪಡೆಯುವುದಕ್ಕಾಗಿ ಭದ್ರತೆಯಾಗಿ ಅಧಿಕೃತ ಡೀಲರನಿಗೆ ಅಡಮಾನ ಮಾಡಬಹುದೆ?

ಹೌದು. ಭಾರತೀಯ ರಿಸರ್ವ್ ಬ್ಯಾಂಕ್ ಅಂತಹ ಅಡಮಾನಕ್ಕಾಗಿ ಸಾಮಾನ್ಯ ಅನುಮತಿಯನ್ನು ನೀಡಿದೆ.

43. ವ್ಯವಹಾರವನ್ನು ಸಮಾಪನಗೊಳಿಸಿದ ನಂತರ ಅಂತಹ ಆಸ್ತಿಯ ಮಾರಾಟದಿಂದ ಬಂದ ಹಣವನ್ನು ತಾನಿರುವ ದೇಶಕ್ಕೆ ಕಳುಹಿಸಬಹುದೆ?

ಹೌದು. ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಪಡೆದು ಕಳುಹಿಸಬಹುದು.

XIII. ವಿದೇಶಿ ದೂತಾವಾಸಗಳಿಂದ/ರಾಜತಾಂತ್ರಿಕರಿಂದ/ಕನ್ಸೂಲೇಟ್ ಜನರಲ್‌ಗಳಿಂದ ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ/ವರ್ಗಾವಣೆ

44. ವಿದೇಶಿ ದೂತಾವಾಸಗಳು/ರಾಜತಾಂತ್ರಿಕರು ಕನ್ಸೂಲೇಟ್ ಜನರಲ್‌ಗಳು ಭಾರತದಲ್ಲಿ ಸ್ಥಿರಾಸ್ತಿಯನ್ನು ಖರೀದಿಸಬಹುದೆ/ಮಾರಾಟ ಮಾಡಬಹುದೆ?

ಹೌದು. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ವಿದೇಶಿ ದೂತಾವಾಸಗಳು/ರಾಜ ತಾಂತ್ರಿಕರು/ಕನ್ಸೂಲೇಟ್ ಜನರಲ್‌ಗಳು ಭಾರತದಲ್ಲಿ ಕೃಷಿ ಜಮೀನು / ತೋಟ / ತೋಟದ ಮನೆಯನ್ನು ಹೊರತುಪಡಿಸಿ, ಯಾವುದೇ ಸ್ಥಿರಾಸ್ತಿಯನ್ನು ಆರ್ಜಿಸಬಹುದು. ಅಂತಹ ಆಸ್ತಿಯನ್ನು ಖರೀದಿಸಬಹುದು/ಮಾರಾಟ ಮಾಡಬಹುದಾಗಿದೆ. ಆದರೆ ಅಂತಹ ಖರೀದಿ/ಮಾರಾಟಕ್ಕಾಗಿ ಮುಂಚಿತವಾಗಿಯೇ ಭಾರತ ಸರ್ಕಾರದ ವಿದೇಶಿ ವ್ಯವಹಾರಗಳ ಮಂತ್ರಾಲಯದ ಅನುಮತಿ ಪಡೆಯಬೇಕು. ಅಂತಹ ಆಸ್ತಿಯ ಖರೀದಿ ಪ್ರತಿಫಲವನ್ನು ಸಾಮಾನ್ಯ ಬ್ಯಾಂಕಿಂಗ್ ವ್ಯವಸ್ಥೆ ಮೂಲಕ ಇಲ್ಲಿಗೆ ರವಾನೆಯಾಗಿಬಂದ ಹಣದಿಂದ ಸಂದಾಯ ಮಾಡಬೇಕು.

XIV. ಇತರ ವಿಷಯಗಳು

45. ಅನಿವಾಸಿ ಭಾರತೀಯನು/ಭಾರತೀಯ ಮೂಲದ ವ್ಯಕ್ತಿಯು ವಿದೇಶಿ ವಿನಿಮಯದಿಂದ/ ರೂಪಾಯಿ ನಿಧಿಗಳಿಂದ ಖರೀದಿಸಿದ ನಿವಾಸ/ವಾಣಿಜ್ಯದ ಆಸ್ತಿಯನ್ನು, ಅದು ಆತನಿಗೆ ತಕ್ಷಣದ ಉಪಯೋಗಕ್ಕೆ ಅಗತ್ಯವಿರದಿದ್ದರೆ ಬಾಡಿಗೆಗೆ ಕೊಡಬಹುದೆ?

ಹೌದು. ಪಡೆದ ಬಾಡಿಗೆಯನ್ನು ಅದು ಚಾಲ್ತಿ ಆದಾಯವಾಗಿದ್ದರಿಂದ, ಎನ್‌ಆರ್‌ಒ/ಎನ್‌ಆರ್‌ಇ ಖಾತೆಗೆ ಜಮೆ ಮಾಡಬಹುದು ಅಥವಾ ವಿದೇಶಕ್ಕೆ ರವಾನಿಸಬಹುದು.

46. ಅನಿವಾಸಿ ಭಾರತೀಯನು ಹಿಂದೆ ಭಾರತದಲ್ಲಿ ವಾಸವಾಗಿದ್ದಾಗ ಭಾರತದಲ್ಲಿ ಸ್ಥಿರಾಸ್ತಿಯನ್ನು ಅಂದರೆ ನಿವಾಸದ/ವಾಣಿಜ್ಯದ ಆಸ್ತಿಯನ್ನು/ಕೃಷಿ ಜಮೀನನ್ನು/ ತೋಟವನ್ನು/ತೋಟದ ಮನೆಯನ್ನು ಆರ್ಜಿಸಿದ್ದರೆ, ಆತನು ಅಂತಹ ಸ್ಥಿರಾಸ್ತಿಯನ್ನು ಹೊಂದಿರುವುದನ್ನು ಮುಂದುವರಿಸಬಹುದೆ ಅಥವಾ ಅದನ್ನು ವರ್ಗಾಯಿಸಬಹುದೆ? ಅದರ ಮಾರಾಟದಿಂದ ಬಂದ ಹಣವನ್ನು ಯಾವ ಖಾತೆಗೆ ಜಮಾ ಮಾಡಬಹುದು?

ಹೌದು. ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಪ್ರಕರಣ 6(5)ರ ಉಪಬಂಧಗಳ ಮೇರೆಗೆ, ಅನಿವಾಸಿ ಭಾರತೀಯನು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯಾಗಿದ್ದಾಗ ಭಾರತದಲ್ಲಿ ಸ್ಥಿರಾಸ್ತಿಯನ್ನು ಆರ್ಜಿಸಿದ್ದರೆ ಆತನು ಅಂತಹ ಆಸ್ತಿಯನ್ನು ಹೊಂದಿರುವುದನ್ನು ಮುಂದುವರಿಸಬಹುದು. ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ, ಆತನು, ಭಾರತದ ಪೌರನಾಗಿರುವ ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಭಾರತದಲ್ಲಿನ ಕೃಷಿ ಜಮೀನನ್ನೂ ತೋಟದ ಆಸ್ತಿಯನ್ನು / ತೋಟದ ಮನೆಯನ್ನು ಮಾರಾಟ ಅಥವಾ ದಾನದ ರೂಪದಲ್ಲಿ ವರ್ಗಾವಣೆ ಮಾಡಬಹುದು ಮತ್ತು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಅಥವಾ ಅನಿವಾಸಿ ಭಾರತೀಯನಿಗೆ/ಭಾರತೀಯ ಮೂಲದ ವ್ಯಕ್ತಿಗೆ ನಿವಾಸದ/ವಾಣಿಜ್ಯದ ಆಸ್ತಿಯನ್ನು ಮಾರಾಟ/ದಾನದ ರೂಪದಲ್ಲಿ ವರ್ಗಾಯಿಸಬಹುದು. ಅಂತಹ ಆಸ್ತಿಯ ಮಾರಾಟದಿಂದ ಬಂದ ಹಣವನ್ನು ಎನ್‌ಆರ್‌ಓ ಖಾತೆಗೆ ಜಮೆ ಮಾಡಬಹುದು.

47. ಭಾರತೀಯ ಮೂಲದ ವ್ಯಕ್ತಿಯು ಹಿಂದೆ ಭಾರತದಲ್ಲಿ ವಾಸವಾಗಿದ್ದಾಗ ಭಾರತದಲ್ಲಿ ಸ್ಥಿರಾಸ್ತಿಯನ್ನು ಅಂದರೆ ನಿವಾಸದ/ವಾಣಿಜ್ಯದ ಆಸ್ತಿಯನ್ನು/ಕೃಷಿ ಜಮೀನನ್ನು/ ತೋಟದ ಆಸ್ತಿಯನ್ನು/ತೋಟದ ಮನೆಯನ್ನು ಖರೀದಿಸಿದ್ದರೆ, ಆತನು ಅಂತಹ ಸ್ಥಿರಾಸ್ತಿಯನ್ನು ಹೊಂದಿರುವುದನ್ನು ಮುಂದುವರಿಸಬಹುದೆ ಅಥವಾ ಅದನ್ನು ವರ್ಗಾಯಿಸಬಹುದೆ? ಅಂತಹ ಆಸ್ತಿಯ ಮಾರಾಟದಿಂದ ಬಂದ ಹಣವನ್ನು ಯಾವ ಖಾತೆಗೆ ಜಮೆ ಮಾಡಬಹುದು?

ಹೌದು. ವಿದೇಶಿ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಪ್ರಕರಣ 6(5)ರ ಉಪಬಂಧಗಳ ಮೇರೆಗೆ, ಆತ ಹಿಂದೆ ಭಾರತದಲ್ಲಿ ವಾಸವಾಗಿದ್ದಾಗ ಭಾರತದಲ್ಲಿ ಸ್ಥಿರಾಸ್ತಿಯನ್ನು ಖರೀದಿಸಿದ್ದರೆ ಅಂತಹ ಆಸ್ತಿಯನ್ನು ಹೊಂದಿರುವುದನ್ನು ಮುಂದುವರಿಸಬಹುದು. ಭಾರತದ ಪ್ರಜೆಯಾಗಿರುವ, ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಭಾರತದಲ್ಲಿನ ಕೃಷಿ ಜಮೀನನ್ನು ತೋಟದ ಆಸ್ತಿಯನ್ನು / ತೋಟದ ಮನೆಯನ್ನು ಲಭ್ಯವಿರುವ ಸಾಮಾನ್ಯ ಅನುಮತಿಯ ಮೇರೆಗೆ ಆತನು ಮಾರಾಟ ಅಥವಾ ದಾನದ ರೂಪದಲ್ಲಿ ವರ್ಗಾಯಿಸಬಹುದು ಮತ್ತು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಅಥವಾ ಅನಿವಾಸಿ ಭಾರತೀಯ/ಭಾರತೀಯ ಮೂಲದ ವ್ಯಕ್ತಿಗೆ ಭಾರತದಲ್ಲಿನ ನಿವಾಸದ/ವಾಣಿಜ್ಯದ ಆಸ್ತಿಯನ್ನು ಮಾರಾಟ/ದಾನದ ರೂಪದಲ್ಲಿ ವರ್ಗಾಯಿಸಬಹುದು. ಆದರೂ, ಭಾರತೀಯ ಮೂಲದ ವ್ಯಕ್ತಿಯು ಪಾಕಿಸ್ತಾನ, ಅಥವಾ ಬಾಂಗ್ಲಾದೇಶ ಅಥವಾ ಶ್ರೀಲಂಕಾ ಅಥವಾ ಅಫಘಾನಿಸ್ತಾನ ಅಥವಾ ಚೀನಾ ಅಥವಾ ಇರಾನ್ ಅಥವಾ ನೇಪಾಳ ಅಥವಾ ಭೂತಾನ್ ದೇಶದ ಪೌರನಾಗಿರುವ ಪಕ್ಷದಲ್ಲಿ, ಆತನು ಭಾರತದಲ್ಲಿನ ಅಂಥ ಸ್ಥಿರಾಸ್ತಿಯ ವರ್ಗಾವಣೆಗಾಗಿ ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನ ಅನುಮೋದನೆ ಕೋರಬೇಕು. ಅಂಥ ಆಸ್ತಿಯ ಮಾರಾಟದಿಂದ ಬಂದ ಹಣವನ್ನು ಎನ್‌ಆರ್‌ಓ ಖಾತೆಗೆ ಜಮೆ ಮಾಡಬಹುದು.

48. ಅನಿವಾಸಿ ಭಾರತೀಯನ/ಭಾರತೀಯ ಮೂಲದ ವ್ಯಕ್ತಿಯ ಎನ್‌ಆರ್‌ಓ ಖಾತೆಗೆ ಜಮೆ ಮಾಡಲಾದ ಪ್ರಶ್ನೆ ಸಂ. 46 ಮತ್ತು 47ಗಳಲ್ಲಿ ಉಲ್ಲೇಖಿಸಿದ, ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣವನ್ನು ವಿದೇಶಕ್ಕೆ ರವಾನಿಸಬಹುದೆ?

ಹೌದು. ಆದರೆ ಸ್ಥಿರಾಸ್ತಿಯನ್ನು ಹತ್ತು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಹೊಂದಿರಬೇಕು.

49. ಅಂತಹ ಸ್ಥಿರಾಸ್ತಿಯನ್ನು ಹತ್ತು ವರ್ಷಗಳಿಗಿಂತ ಕಡಿಮೆ ಅವಧಿಗೆ ಹೊಂದಿದ್ದಲ್ಲಿ ಏನು ಮಾಡಬೇಕು?

ರೂಪಾಯಿ ನಿಧಿಗಳಿಂದ ಆರ್ಜಿಸಿದ ಅಂತಹ ಆಸ್ತಿಯನ್ನು ಹತ್ತು ವರ್ಷಗಳಿಗಿಂತ ಕಡಿಮೆ ಅವಧಿಗೆ ಹೊಂದಿದ್ದ ನಂತರ ಮಾರಾಟ ಮಾಡಿದಲ್ಲಿ, ಮಾರಾಟದಿಂದ ಬಂದ ಹಣವನ್ನು ಎನ್‌ಆರ್‌ಓ ಖಾತೆ(ಉಳಿತಾಯಗಳು/ಸಾವಧಿ ಠೇವಣಿ)ಯಲ್ಲಿ ಬಾಕಿ ಅವಧಿಗಾಗಿ ಅಥವಾ ಇತರ ಯಾವುದೇ ಅರ್ಹ ಹೂಡಿಕೆಗಾಗಿ ಇಟ್ಟುಕೊಂಡಿದ್ದರೆ ಹಣದ ರವಾನೆಯನ್ನು ಮಾಡಬಹುದು. ಆದರೆ, ಸ್ಥಿರಾಸ್ತಿಯ ಮಾರಾಟದಿಂದ ಬಂದ ಹಣದಿಂದ ಅಂಥ ಹೂಡಿಕೆ ಮಾಡಲಾಗಿದೆಯೆಂಬುದು ಕಂಡುಬರಬೇಕು.

50. ಭಾರತದಲ್ಲಿ ಅಥವಾ ಭಾರತದ ಹೊರಗಡೆ ವಾಸವಾಗಿರುವ ಭಾರತೀಯ ಮೂಲದವರಲ್ಲದ ವಿದೇಶಿ ರಾಷ್ಟ್ರೀಯರು ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿರ್ದಿಷ್ಟ ಅನುಮೋದನೆ ಪಡೆದು ಈ ಹಿಂದಿನ ಫೆರಾ ಮೇರೆಗೆ ಭಾರತದಲ್ಲಿ ನಿವಾಸದ ಆಸ್ತಿಯನ್ನು ಆರ್ಜಿಸಿದರೆ, ಅವರು ಫೆಮಾ, 1999ರ ಪ್ರಕರಣ 6(5)ರ ಉಪಬಂಧಗಳ ಮೇರೆಗೆ, ಅದನ್ನು ಹೊಂದಿರುವುದನ್ನು ಮುಂದುವರಿಸಬಹುದಾದರೆ ಅವರು ಅಂತಹ ಆಸ್ತಿಯನ್ನು ವರ್ಗಾಯಿಸಬಹುದೆ?

ಹೌದು. ಮುಂಚಿತವಾಗಿಯೇ ರಿಸರ್ವ್ ಬ್ಯಾಂಕಿನಿಂದ ಅನುಮೋದನೆ ಪಡೆದು ಮಾತ್ರ ವರ್ಗಾಯಿಸಬಹುದು.

51. ವಿದೇಶಿ ವಿನಿಮಯ ನಿರ್ವಹಣೆ (ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆ) ನಿಯಂತ್ರಣಗಳು, 2000ದ ಉಪಬಂಧಗಳು ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ಅನ್ವಯವಾಗುತ್ತವೆಯೇ?

ಪಾಕಿಸ್ತಾನ ಅಥವಾ ಬಾಂಗ್ಲಾದೇಶ ಅಥವಾ ಭೂತಾನ್ ಅಥವಾ ಶ್ರೀಲಂಕಾ ಅಥವಾ ಅಫಘಾನಿಸ್ತಾನ ಅಥವಾ ಚೀನಾ ಅಥವಾ ಇರಾನ್ ಅಥವಾ ನೇಪಾಳ ಅಥವಾ ಭೂತಾನ್ ದೇಶದ ಪ್ರಜೆಯಾಗಿರುವ, ಭಾರತದಲ್ಲಿ ವಾಸವಾಗಿರುವ ವ್ಯಕ್ತಿಗೆ ವಿದೇಶಿ ವಿನಿಮಯ ನಿರ್ವಹಣೆ (ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆ ಮತ್ತು ವರ್ಗಾವಣೆ) ನಿಯಂತ್ರಣಗಳು, 2000ದ ಉಪಬಂಧಗಳು ಅನ್ವಯವಾಗುತ್ತವೆ.

52. 'ಭಾರತದಲ್ಲಿ ವಾಸವಾಗಿರುವ ವ್ಯಕ್ತಿ' ಮತ್ತು 'ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿ' ಎಂಬ ಪದಗಳಿಗೆ ಎಲ್ಲಿ ಅರ್ಥ ವಿವರಣೆ ಕೊಡಲಾಗಿದೆ?

ಫೆಮಾ ಪ್ರಕರಣ 2(ಎ) ಯಲ್ಲಿ ಮತ್ತು ಪ್ರಕರಣ 2(ಡಬ್ಲ್ಯು)ನಲ್ಲಿ ಅನುಕ್ರಮವಾಗಿ 'ಭಾರತದಲ್ಲಿ ವಾಸವಾಗಿರುವ ವ್ಯಕ್ತಿ' ಮತ್ತು ' ಭಾರತದ ಹೊರಗಡೆ ವಾಸವಾಗಿರುವ ವ್ಯಕ್ತಿ' ಎಂಬ ಪದಗಳಿಗೆ ಅರ್ಥವಿವರಣೆ ಕೊಡಲಾಗಿದೆ.

53. ಭಾರತದಲ್ಲಿ ವಾಸವಾಗಿರುವ ವ್ಯಕ್ತಿ ಎಂದರೇನು?

ಫೆಮಾ ದೃಷ್ಟಿಕೋನದಿಂದ ಹೇಳುವುದಾದರೆ, ಭಾರತದಲ್ಲಿ ವಾಸವಾಗಿರುವ ವ್ಯಕ್ತಿ ಎಂದರೆ ಹಿಂದಿನ ಹಣಕಾಸು ವರ್ಷದ (ಏಪ್ರಿಲ್ – ಮಾರ್ಚ್) ಕ್ರಮಾನುಗತಿಯ ಅವಧಿಯಲ್ಲಿ ಒಂದು ನೂರ ಎಂಬತ್ತೆರಡು ದಿನಗಳಿಗಿಂತ ಹೆಚ್ಚು ಅವಧಿಯಲ್ಲಿ ಭಾರತದಲ್ಲಿ ವಾಸವಾಗಿರುವ ಮತ್ತು ಭಾರತದಲ್ಲಿ ಉದ್ಯೋಗವನ್ನು ಕೈಗೊಳ್ಳುವುದಕ್ಕಾಗಿ, ವ್ಯಾಪಾರ ಅಥವಾ ವೃತ್ತಿಯನ್ನು ನಿರ್ವಹಿಸುವುದಕ್ಕಾಗಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ ಅನಿಶ್ಚಿತ ಅವಧಿಗೆ ಭಾರತದಲ್ಲಿ, ತಂಗುವ ಆತನ ಇಂಗಿತವನ್ನು ಸೂಚಿಸಿ ಭಾರತಕ್ಕೆ ಬರುವ ಅಥವಾ ಭಾರತದಲ್ಲಿ ಉಳಿಯುವ ವ್ಯಕ್ತಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಫೆಮಾ ಮೇರೆಗೆ 'ಭಾರತದಲ್ಲಿ ವಾಸವಾಗಿರುವ ವ್ಯಕ್ತಿ' ಎಂಬುದಾಗಿ ಪರಿಗಣಿಸಬೇಕಾದಲ್ಲಿ ಒಬ್ಬ ವ್ಯಕ್ತಿಯು ತಂಗುವ ಅವಧಿಗೆ ಸಂಬಂಧಿಸಿದ (ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ 182 ದಿನಗಳಿಗಿಂತ ಹೆಚ್ಚಿರುವ ಅವಧಿಯ) ಷರತ್ತನ್ನು ಈಡೇರಿಸುವುದು ಮಾತ್ರವಲ್ಲದೆ ತಂಗುವ ಉದ್ದೇಶಕ್ಕೆ/ಇಂಗಿತಕ್ಕೆ ಸಂಬಂಧಿಸಿದ ಷರತ್ತನ್ನು ಕೂಡ ಪಾಲಿಸಬೇಕು.

54. ಭಾರತದಲ್ಲಿ ಸ್ಥಿರಾಸ್ತಿಯ ಆರ್ಜನೆಯ ಉದ್ದೇಶಕ್ಕಾಗಿ ರಿಸರ್ವ್ ಬ್ಯಾಂಕು ವ್ಯಕ್ತಿಯ ನಿವಾಸದ ಸ್ಥಾನಮಾನವನ್ನು ನಿರ್ಧರಿಸುತ್ತದೆಯೆ?

ಇಲ್ಲ. ಫೆಮಾ ಮೇರೆಗೆ, ಕಾನೂನಿನ ಕಾರ್ಯರೀತಿಯಿಂದ ನಿವಾಸದ ಸ್ಥಾನಮಾನವು ನಿರ್ಧಾರವಾಗುತ್ತದೆ. ಅದನ್ನು ಯಾವುದೇ ಇತರ ಪ್ರಾಧಿಕಾರವು ಪ್ರಶ್ನಿಸಿದಲ್ಲಿ ಆತನ/ಆಕೆಯ ನಿವಾಸದ ಸ್ಥಾನಮಾನವನ್ನು ರುಜುವಾತುಪಡಿಸುವುದು ಆತನದೇ ಹೊಣೆಗಾರಿಕೆಯಾಗಿರುತ್ತದೆ.

55. ವಿದೇಶಿ ರಾಷ್ಟ್ರೀಯನು (ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಅಫಘಾನಿಸ್ತಾನ, ಚೀನಾ, ಇರಾನ್, ನೇಪಾಳ ಮತ್ತು ಭೂತಾನ್ ದೇಶದ ಪೌರನನ್ನು ಹೊರತುಪಡಿಸಿ) ಫೆಮಾ, 1999ರ ಪ್ರಕರಣ (v)(i) ಬಿಯ ಉಪಬಂಧಗಳಿಗನುಸಾರವಾಗಿ ಭಾರತದಲ್ಲಿ ವಾಸವಾಗಿರುವ ವ್ಯಕ್ತಿಯಾಗಿದ್ದಲ್ಲಿ ಭಾರತದಲ್ಲಿ, ಯಾವುದೇ ಸ್ಥಿರಾಸ್ತಿಯನ್ನು ಖರೀದಿಸಲಿಕ್ಕೆ ಆತನಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಬೇಕಾಗಿದೆಯೇ?

ಇಲ್ಲ. ಫೆಮಾ ದೃಷ್ಟಿಕೋನದಿಂದ ಹೇಳುವುದಾದರೆ, ರಿಸರ್ವ್ ಬ್ಯಾಂಕಿನಿಂದ ಆತನು ಯಾವುದೇ ಅನುಮೋದನೆ ಪಡೆಯುವ ಅಗತ್ಯವಿಲ್ಲ. ಆದರೂ, ಆಯಾ ರಾಜ್ಯ ಸರ್ಕಾರ ಇತ್ಯಾದಿ ಇತರ ಪ್ರಾಧಿಕಾರಗಳು ಗೊತ್ತುಪಡಿಸಿದ ಯಂತ್ರಣಗಳ ನಿಬಂಧನೆಗಳಲ್ಲಿ ಅಗತ್ಯಪಡಿಸಲಾದ ಯಾವುದೇ ಅನುಮೋದನೆಗಳನ್ನು ಆತನು/ಆಕೆಯು ಪಡೆಯಬೇಕಾಗುತ್ತದೆ.